## ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
## ಮಲ್ಲೇಶ್ವರಂ ಉಪ-ವಿಭಾಗದ ವಾರ್ಡ್ ಸಂಖ್ಯೆ-65 ಕಾಡುಮಲ್ಲೇಶ್ವರ
## ಕಛೇರಿಯಲ್ಲಿ ದಿನಾಂಕ: 17.05.2021 ರಂದು ನಡೆದ ಮೀಟಿಂಗ್ ನಡವಳಿಗಳು.

**ವಿಷಯ** : ಪಾಲಿಕೆ ಎಲ್ಲಾ ವಾರ್ಡ್‌ಗಳಲ್ಲಿ "Ward Decentralized Triage and Emergency Response (DETER) " Committee for Covid-19 Management (WDC) ರಚಿಸುವ ಕುರಿತು.

**ಉಲ್ಲೇಖ** : 1. ವಾಡ್ ಕಮಿಟಿ ನೋಡಲ್ ಅಧಿಕಾರಿಗಳನ್ನು ನೇಮಿಸಿರುವ ಕಛೇರಿ ಆದೇಶದ ಸಂಖ್ಯೆ ಬಿ12(5)ಪಿ.ಆರ್/35/20-21, ದಿನಾಂಕ : 16.04.2021

2. ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ ನಂ.RD 158 TNR 2020, ದಿನಾಂಕ :07-05-2021

3. ಈ ಕಛೇರಿಯ ಸಭಾ ಸೂಚನೆ ಪತ್ರದ ದಿನಾಂಕ :13.05.2021

* * * * *

ಉಲ್ಲೇಖ (1) ರ ಸಭಾ ಸೂಚನಾ ಪತ್ರದ ಅನುಸಾರ ಉಲ್ಲೇಖ (2) ರ ಆದೇಶದ ಅಂಶಗಳನ್ನು ಪರಿಶೀಲಿಸಲು ದಿನಾಂಕ : 17-05-2021 ರಂದು ಕಾಡುಮಲ್ಲೇಶ್ವರ ವಾರ್ಡ್ ನಂ.65ರ ಕಾರ್ಯಾಲಯದಲ್ಲಿ ವಾರ್ಡ್ ಕಮಿಡಿ ಸಮಿತಿ ಸಭೆಯನ್ನು ಉಲ್ಲೇಖ ಪತ್ರ (3) ರಂತೆ ಬೆಳಗ್ಗೆ 11:00 ಗಂಟೆಗೆ ಕರೆಯಲಾಗಿದ್ದು, ಸದರಿ ಸಭೆಯ ನಡವಳಿಗಳು.

ಹಾಜರಿದ್ದವರು :

| ಕ್ರ.ಸಂ. | ಹೆಸರು | ಸಮಿತಿಯ ಹುದ್ದೆ | ಮೊಬೈಲ್ ಸಂಖ್ಯೆ |
|---|---|---|---|
| 1 | ಶ್ರೀ ಜಿ. ಇಂದ್ರಕುಮಾರ್, | ನೋಡಲ್ ಅಧಿಕಾರಿ | 9513185484 |
| 2 | ಶ್ರೀ ನರಸಿಂಹಯ್ಯ | ಕಾರ್ಯದರ್ಶಿ | 9686201001 |
| 3 | ಶ್ರೀ ಡಾ. ಅನಿಲ್, ವೈದ್ಯಾಧಿಕಾರಿ | ಸದಸ್ಯರು | 7406110670 |
| 4 | ಶ್ರೀ. ಶಿವಕುಮಾರ್, ಹಿರಿಯ ಆರೋಗ್ಯಾ ಪರಿವೀಕ್ಷಕರು | ಸದಸ್ಯರು | 9448228530 |
| 5 | ಶ್ರೀ. ವೆಂಕಟೇಶ್, ಕಿರಿಯ ಆರೋಗ್ಯಾ ಪರಿವೀಕ್ಷಕರು | ಸದಸ್ಯರು | 9742050496 |
| 6 | ಶ್ರೀಮತಿ ಶಿಲ್ಪ, ಎ.ಇ. (ಬೃಹತ್ ನೀರುಗಾಲುವೆ) | ಸದಸ್ಯರು | 7338228981 |
| 7 | ಶ್ರೀಮತಿ ಶಿಲ್ಪ, ಸಹ ಕಂದಾಯ ಅಧಿಕಾರಿ | ಸದಸ್ಯರು | 9480685406 |
| 8 | ಶ್ರೀ. ಪುಷ್ಪ, ಎ.ಇ. (ಬಿಡಬ್ಲ್ಯೂ.ಎಸ್.ಎಸ್.ಬಿ) | ಸದಸ್ಯರು | 9611838985 |
| 8 | ಶ್ರೀ ವಿನಯ್‌ಕುಮಾರ್, ಬೀದಿದೀಪ ಇಲಾಖೆ | ಸದಸ್ಯರು | 8123632903 |
| 9 | ಶ್ರೀ ಮಂಜುನಾಥ್, ಎ.ಇ. ಬೆಸ್ಕಾಂ | ಸದಸ್ಯರು | 9449844642 |
| 10 | ಶ್ರೀ. ಶಿವಕುಮಾರ್, ಅರಣ್ಯ ಇಲಾಖೆ | ಸದಸ್ಯರು | 9480683341 |
| 11 | ಪೋಲೀಸ್ ಇನ್ಸ್‌ಪೆಕ್ಟರ್ (ಕಾನೂನು ಮತ್ತು ಸುವ್ಯವಸ್ಥೆ) ಮಲ್ಲೇಶ್ವರಂ ಪೋಲೀಸ್ ಠಾಣೆ, | ಸದಸ್ಯರು | 9480801315 |
| 12 | ಪೋಲೀಸ್ ಇನ್ಸ್‌ಪೆಕ್ಟರ್ (ಸಂಚಾರಿ) ಮಲ್ಲೇಶ್ವರಂ ಪೋಲೀಸ್ ಠಾಣೆ, | ಸದಸ್ಯರು | 9449962626<br>9480801922 |
| 13 | ಶ್ರೀಮತಿ ರೇಖಾಚಾರಿ | ಸದಸ್ಯರು | 9844086982 |
| 14 | ಶ್ರೀಮತಿ ಉಷಾ ಧನರಾಜ್ | ಸದಸ್ಯರು | 9591143888 |
| 15 | ಶ್ರೀ ಜಗನಾಥ್ | ಸದಸ್ಯರು | 9886599054 |

ಶ್ರೀ ನರಸಿಂಹಯ್ಯ ಸದಸ್ಯರು ಕಾರ್ಯದರ್ಶಿಗಳು ಕಮಿಟಿ ಹಾಗೂ ಸಹಾಯಕ ಅಭಿಯಂತರರು ಸಭೆಯಲ್ಲಿ ಹಾಜರಿದ್ದ ಎಲ್ಲರನ್ನು ಸ್ವಾಗತಿಸಿದರು.

Scanned with CamScanner

ಶ್ರೀ. ಜಿ. ಇಂದ್ರಕುಮಾರ್, ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿ, ವಾರ್ಡ್ ಸಂ.65ರ ವಾರ್ಡ್ ಕಮಿಟಿ ರವರು ಮಾತನಾಡುತ್ತಾ, (2) ರ ಆದೇಶವನ್ನು ವಿವರಿಸುತ್ತಾ ವಾರ್ಡ್ ನಂ. 65ರಲ್ಲಿ "Ward Decentralized Triage and Emergency Response ETER)" Committee for Covid-19 Management (WDC) ಯ ಸಮಿತಿ ರಚನೆ "ವಾರ್ಡ್ ಮಟ್ಟದ ಕೋವಿಡ್ ನಿರ್ವಹಣೆ WDC (ವಾರ್ಡ್ ತಡೆ ಸಮಿತಿ) ವಿಕೇಂದ್ರೀಕೃತ ಚಿಕಿತ್ಸೆಯ ಸರದಿ ನಿರ್ಧಾರ ಮತ್ತು ತುರ್ತು ಪ್ರತಿಕ್ರಿಯೆ ಕೇಂದ್ರ"ದ ರಚನೆ, ಸ್ವರೂಪ, ಕಾರ್ಯವಿಧಾನ, ಅಗತ್ಯತೆ ಹಾಗೂ ಕೋವಿಡ್-19 ರ ನಿಯಂತ್ರಣ ಹಾಗೂ ಚಿಕಿತ್ಸೆ ಸಂಬಂಧ ತೆಗೆದುಕೊಳ್ಳಬೇಕಾದ ಕಾರ್ಯಗಳ ಬಗ್ಗೆ ಸಭೆಗೆ ವಿವರವಾಗಿ ತಿಳಿಸಿದರು.

1. ಹಿಂದಿನ ಸಭೆಗಳಲ್ಲಿ ನಿರ್ಣಯಗಳ ಅನುಪಾಲನೆ ಹಾಗೂ ಸಾರ್ವಜನಿಕರಿಗೆ ಸಮರ್ಪಕ ಸೇವೆ ನೀಡುವ ಬಗ್ಗೆ ಹಿಂದಿನ ಸಭೆಗಳಲ್ಲಿ ತೆಗೆದುಕೊಂಡ ನಿರ್ಧಾರಗಳಿಗೆ ಅನುಪಾಲನೆ ಮತ್ತು ವಾರ್ಡ್‌ನಲ್ಲಿ ಸಾರ್ವಜನಿಕರ ದಿನನಿತ್ಯ ಮೂಲಭೂತ ಸೌಕರ್ಯಗಳು ಹಾಗೂ ಸೇವೆ ಒದಗಿಸುವ ಸಂಬಂಧ ನಿರಂತರವಾಗಿ ಕ್ರಮವಹಿಸಲು ಹಾಜರಿದ್ದ ಎಲ್ಲಾ ಬಿಬಿಎಂಪಿ ಅಧಿಕಾರಿ ಸಿಬ್ಬಂದಿಯವರಿಗೆ ತಿಳಿಸಿದರು.
2. ಕೋವಿಡ್-19 ನಿಯಂತ್ರಣ ಸಂಬಂಧ "DETER" ಸಮಿತಿ ರಚನೆ ಹಾಗೂ ತೆಗೆದುಕೊಳ್ಳಬೇಕಾದ ಕ್ರಮಗಳ ಬಗ್ಗೆ.
    1. "Physical Triaging" ಹಾಗೂ ವಾರ್ಡ್ ವಾರ್ ರೂಂ ಸ್ಥಾಪನೆಗಾಗಿ ಸೂಕ್ತ ಕಟ್ಟಡ ಸ್ಥಳಾವಕಾಶ ಗುರುತಿಸುವ ಬಗ್ಗೆ ಸಭೆಯಲ್ಲಿ ಚರ್ಚಿಸಿ ಸೂಕ್ತ ಅಗತ್ಯ ಕೇಂದ್ರ ಸ್ಥಾಪಿಸಲು ಕ್ರಮ ವಹಿಸಲು ನಿರ್ಧರಿಸಲಾಯಿತು.
    2. ವಾರ್ಡ್‌ನ ವಾರ್‌ರೂಂಗೆ ಪ್ರತ್ಯೇಕ ಅಗತ್ಯವಿರುವ ಟೆಲಿಫೋನ್, ಕಾಲ್ ಸೆಂಟರ್ ಸೌಲಭ್ಯ ಒದಗಿಸಲು ವಲಯವಾರು ಆದೇಶದಂತೆ ಕ್ರಮಕೈಗೊಳ್ಳಲು ಸಭೆಯಲ್ಲಿ ತೀರ್ಮಾನಿಸಲಾಯಿತು.
    3. ವಾರ್ಡ್‌ವಾರು ಸ್ವಯಂ ಸೇವಕರನ್ನು ನಿಯಮಾನುಸಾರ ನೋಂದಾಯಿಸಿಕೊಳ್ಳುವುದು, ವಾರ್ಡಿನಲ್ಲಿ, ವೈದ್ಯರು, ಪ್ಯಾರಾಮೆಡಿಕಲ್ ಸಿಬ್ಬಂದಿಯವರನ್ನು ಗುರುತಿಸಿ, ಅಗತ್ಯ ವಿವರ ಸಂಗ್ರಹಣೆ ಹಾಗೂ RWA ಗಳನ್ನು ಸೇರಿಸಿಕೊಂಡು ಸರ್ಕಾರಿ ಆದೇಶದ ಪ್ರಕಾರ ಕಾರ್ಯವಾರು ಗುಂಪು ರಚಿಸಲು ಸಭೆಯಲ್ಲಿ ತೀರ್ಮಾನಿಸಲಾಯಿತು.
    4. ವಾರ್ಡ್ ಮಟ್ಟದ ಇಲಾಖಾ ಅಧಿಕಾರಿಗಳು ಕೋರ್‌ಗ್ರೂಪ್, NGO ಹಾಗೂ ಸ್ವಯಂ ಸೇವಕರ ಗ್ರೂಪ್ ಮತ್ತು ಆಸ್ಪತ್ರೆ/ಹೋಂ ಐಸೋಲೇಷನ್ ಗಮನಿಸುವಿಕೆ, ವೈದ್ಯಕೀಯ ಸಿಬ್ಬಂದಿಗಳ ವಾಟ್ಸ್ ಆಪ್ ಗ್ರೂಪ್‌ಗಳನ್ನು ರಚಿಸಿ ಸಕ್ರಿಯಗೊಳಿಸಿಕೊಳ್ಳಲು ತೀರ್ಮಾನಿಸಲಾಯಿತು.
    5. ಬಿಬಿಎಂಪಿ ಕೇಂದ್ರ ಕಛೇರಿಯಿಂದ ನೀಡಲ್ಪಡುವ ಸೂಚನೆಗಳು ಹಾಗೂ ಮಾರ್ಗಸೂಚಿಗಳು, ಸರ್ಕಾರಿ ಆದೇಶಗಳು, ವಲಯ ಕಛೇರಿಯ ಆದೇಶ ಅನುಸಾರ, ಆದ್ಯತೆ ಮೇಲೆ ಕ್ರಮ ವಹಿಸಲು ತೀರ್ಮಾನಿಸಲಾಯಿತು.
    6. ಸಾರ್ವಜನಿಕರು ಸಭೆಯಲ್ಲಿ ವ್ಯಾಕ್ಸಿನೇಶನ್ ಬಗ್ಗೆ ವಾರ್ಡ್ ನೋಡಲ್ ಅಧಿಕಾರಿಗಳು, ಸಂಬಂಧಪಟ್ಟ ಆರೋಗ್ಯ ವೈದ್ಯಾಧಿಕಾರಿಗಳಿಂದ ಮಾಹಿತಿಯನ್ನು ಸಂಗ್ರಹಿಸಿ ಮಾಹಿತಿಯನ್ನು ನೀಡಲಾಗುವುದೆಂದು ತಿಳಿಸಲಾಗಿದೆ.
    7. ಸಾರ್ವಜನಿಕರು ಬೀದಿದೀಪಗಳ ನಿರ್ವಹಣೆ ಬಗ್ಗೆ ಹಾಜರಿದ್ದ ನಿರ್ವಹಣೆ ಸಿಬ್ಬಂದಿಯವರನ್ನು ಕೇಳಿದ ಸಮಸ್ಯೆಗಳ ಬಗ್ಗೆ ನಿರ್ವಹಿಸಿಕೊಡುವುದಾಗಿ ಸಭೆಗೆ ಮಾಹಿತಿಯನ್ನು ಒದಗಿಸಿರುತ್ತಾರೆ.
    8. ವಾರ್ಡ್-65ರಲ್ಲಿ ನಡೆಯುತ್ತಿರುವ ಕಾಮಗಾರಿಗಳ ಬಗ್ಗೆ ಹಾಗೂ ಓ.ಎಫ್.ಸಿ ಸಮಸ್ಯೆಗಳ ಬಗ್ಗೆ ಸಾರ್ವಜನಿಕರು ಕೇಳಿರುವ ಸಮಸ್ಯೆಗಳ ಬಗ್ಗೆ ವಾರ್ಡ್ ಇಂಜಿನಿಯರ್ ರವರು ಬಗೆಹರಿಸಿರುವುದಾಗಿ ತಿಳಿಸಿರುತ್ತಾರೆ.
    9. ವಾರ್ಡ್-65ರಲ್ಲಿ ನಿರಾಶ್ರಿತರಿಗೆ ದಿನದ ಮೂರು ಹೊತ್ತು ಸರ್ಕಾರದ ಇಂದಿರಾ ಕ್ಯಾಂಟೀನ್‌ನಿಂದ ಊಟವನ್ನು ಒದಗಿಸುವುದಾಗಿ ಹಾಜರಿದ್ದ, ಆರೋಗ್ಯಾಧಿಕಾರಿಗಳು ಸಭೆಗೆ ತಿಳಿಸಿರುತ್ತಾರೆ.
    10. ಕೋವಿಡ್-19 ಸೋಂಕಿನಿಂದ ಮೃತಪಟ್ಟವರಿಗೆ ಹೆಲ್ಪ್‌ಲೈನ್ ಮುಖಾಂತರ ಸೇವೆಯನ್ನು ಒದಗಿಸುವುದಾಗಿ ತಿಳಿಸಿರುತ್ತಾರೆ.

ಈ ಎಲ್ಲಾ ಕ್ರಮಗಳನ್ನು ತ್ವರಿತವಾಗಿ, ಆದ್ಯತೆ ಮೇಲೆ ಕೈಗೊಂಡು ಮುಂಬರುವ ಸಭೆಯಲ್ಲಿ ಮಂಡಿಸಲು ಸೂಚಿಸಿ ವಂದನೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

(ನರಸಿಂಹಯ್ಯ) 13/8/21
ಸದಸ್ಯ ಕಾರ್ಯದರ್ಶಿ
ಹಾಗೂ ಸಹಾಯಕ ಅಭಿಯಂರರರು
ವಾರ್ಡ್ ನಂ. 65 ಕಾಡುಮಲ್ಲೇಶ್ವರ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

(ಜಿ ಇಂದ್ರಕುಮಾರ್)
ವಾರ್ಡ್ ಸಮಿತಿ ಅಧ್ಯಕ್ಷರು
ಹಾಗೂ ವಾರ್ಡ್‌ನ ನೋಡಲ್ ಅಧಿಕಾರಿ
ಕಾರ್ಯಪಾಲಕ ಅಭಿಯಂತರರಯ (ಬೃನೀ.ಕಾ) ಯಲಹಂಕ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

Scanned with CamScanner

ಪ್ರತಿಯನ್ನು:

1. ಮಾನ್ಯ ಆಯುಕ್ತರು ರವರ ಅವಗಾಹನೆಗೆ ಸಲ್ಲಿಸಲು ಆಪ್ತ ಕಾರ್ಯಾಲಯಕ್ಕೆ ಸಲ್ಲಿಸಿದೆ.
2. ಮಾನ್ಯ ವಿಶೇಷ ಆಯುಕ್ತರು (ಯೋಜನೆ) ರವರ ಅವಗಾಹನೆಗೆ ಸಲ್ಲಿಸಿದೆ.
3. ಮಾನ್ಯ ವಿಶೇಷ ಆಯುಕ್ತರು (ಘನತ್ಯಾಜ್ಯ) ರವರ ಅವಗಾಹನೆಗೆ ಸಲ್ಲಿಸಿದೆ.
4. ಜಂಟಿ ಆಯುಕ್ತರು (ಪಶ್ಚಿಮ) ರವರ ಅವಗಾಹನೆಗೆ ಸಲ್ಲಿಸಿದೆ.
5. ಮುಖ್ಯ ಅಭಿಯಂತರರು (ಪಶ್ಚಿಮ) ರವರ ಅವಗಾಹನೆಗೆ ಸಲ್ಲಿಸಿದೆ.
6. ಅಧೀಕ್ಷಕ ಅಭಿಯಂತರರು (ಪಶ್ಚಿಮ) ರವರ ಅವಗಾಹನೆಗೆ ಸಲ್ಲಿಸಿದೆ.
7. ಕಾರ್ಯಪಾಲಕ ಅಭಿಯಂತರರು, ಮಲ್ಲೇಶ್ವರಂ ವಿಭಾಗರವರಿಗೆ ಸೂಕ್ತ ಕ್ರಮಕ್ಕಾಗಿ ಸಲ್ಲಿಸಿದೆ.
8. ಸಹಾಯಕ ಕಾರ್ಯಪಾಲಕ ಅಭಿಯಂತರರು, ಮಲ್ಲೇಶ್ವರಂ ಉಪ-ವಿಭಾಗ ರವರಿಗೆ ಮುಂದಿನ ಕ್ರಮಕ್ಕೆ

Scanned with CamScanner